## ನಾನು ಯಾರು?

ಯಾರು ತಳ್ಳಿದರೋ ನನ್ನನು
ಈ ರಂಗಮಂಚಕ್ಕೆ...
ಪಾತ್ರಧಾರಿಗಳು ಹಲವಾರು
ವೀಕ್ಷಕನೊಬ್ಬನೇ ಈ ನಾಟಕಕ್ಕೆ.

ತೊಡಿಸಿದರು ಮುಖವಾಡ
'ಎಲ್ಲರಂತೆಯೇ ನೀನಾಗು...'
ಹಚ್ಚಿದರು ಬಣ್ಣ
'ಸಂಭ್ರಮದಿ ಕುಣಿದಾಡು...'

ಈ ಮುಖವಾಡ ತೊಟ್ಟು
ವರುಷಗಳೇ ಕಳೆದಿವೆ..
ಮುಖದೊಂದಿಗೆ ಬಣ್ಣವೆಲ್ಲ
ಬೆಸೆದು ಹೋಗಿದೆ.

ಬಂದು ಕುಣಿದು ಕಾಣೆಯಾದ
ಪಾತ್ರಗಳು ನೂರಾರು.
ನನ್ನಲಿ ಕೊನೆಗೆ ಉಳಿದಿದ್ದೊಂದೇ ಪ್ರಶ್ನೆ–
'ಇಲ್ಲಿ ನಾನ್ಯಾರು?'

**● ವಿಜಯ್ ಭಟ್**

## ವಿಮುಖನಾಗು

ಸುತ್ತಲೂ ಬಣ್ಣಗಳ ಈಡಾಡಿಕೊಂಡು
ಮತ್ತೆ... ಬಣ್ಣಗೆಟ್ಟ ಕಂಗಳದೇತಕೆ?
ಹತ್ತು ರಂಗು ಮುಖದಲಿ
ಮತ್ತೂ... ತಣ್ಣಗಾದ ಭಾವವೇಕೆ?

ನೂರು ಕತೆಯ ಬದಿಯಲಿಟ್ಟು
ದೂರುಗಳನು ದೂರವಿಟ್ಟು
ಮೆತ್ತಿಕೊಂಡ ದುಗುಡಗಳ
ಕೆತ್ತಿ, ಒರೆಸಿ ಬಿಸುಡಿಬಿಡು

ಸುಖದ ಸೀಮೆ ಕಣ್ಣ ಮುಂದೆ
ವಿಮುಖನಾಗು ತವಕಗಳಿಗೆ



ತಲ್ಲಣಗಳ ತಿಲ್ಲಾನ ಬೇಡವೀಗ
ಬೆಡಗಿನುಲ್ಲಾಸದೊಡನಾಟ ಬೇಕೀಗ

ಆಗು ಬಾ, ಹೃದಯದುಂಬಿ
ಬಣ್ಣವಿಲ್ಲದ ಖಾಲಿತನಕೆ
ರಂಗಿನೋಕುಳಿ, ಬರೆದುಬಿಡು
ರಸಿಕತೆಯ ರಂಗೋಲಿ

**● ಬಿ.ಕೆ. ಮೀನಾಕ್ಷಿ**

## ಬಣ್ಣದ ಬವಣೆ

ಹಬ್ಬದ ಸಂಭ್ರಮ ಸುತ್ತ ತುಂಬಿದೆ
ವರ್ಣ ವೈಭವದ ನಡುವೆ
ನಕ್ಕುನಲಿಯುವ ಜನರ ಮಧ್ಯದಲಿ
ಬಣ್ಣವೇ ನನ್ನ ಬವಣೆ

ಬಣ್ಣಬಣ್ಣದ ಉಡುಗೆ ಧರಿಸಿದ
ಜನಕೆ ಸಂಭ್ರಮ ತರಲು
ಮೈಗೆ ಬಣ್ಣವ ಹಚ್ಚಿ ಕುಣಿಯುವೆ
ಮರೆತು ಹೃದಯದ ನೋವು

ಹಬ್ಬ ಬಂದರೂ ನಿತ್ಯದೂಟಕೆ
ಬಣ್ಣ ಹಚ್ಚಬೇಕು ನಾನು
ತುತ್ತುಕೂಳಿಗೆ, ತುಂಡುಬಟ್ಟೆಗೆ
ಈ ಛದ್ಮವೇಷವೇ ಗತಿಯು

ಹಲವು ಬಣ್ಣಗಳ ಹಚ್ಚಿಕೊಂಡರೂ
ವರ್ಣಹೀನವೀ ಬದುಕು
ಸಣ್ಣ ಆಸೆಗೆ ಜೀವ ತುಂಬಲು
ಬಣ್ಣದೊಂದಿಗೇ ಬದುಕು.

**● ಜೆಸ್ಸಿ ಪಿ.ವಿ.**